॥ ಶ್ರೀಃ ॥

॥ ಅಂಬರೀಷವರದಾಯ ನಮಃ ॥

ಶ್ರೀಮದ್ಭಾಗವತಪುರಾಣದೊಳಗಣ
ದ್ವಾದಶೀವ್ರತಮಾಹಾತ್ಮ್ಯವೆಂಬ
ಯಕ್ಷಗಾನ ಅಂಬರೀಷಚರಿತ್ರೆಯು.

ಕಂದ.

ಶ್ರೀಸರುವೇಶಂ ನತತತಿ ।
ಪೋಷಂ ದಿನಕರಶತಕೋಟಿಪ್ರಕಾಶಂ ॥
ವಾಸವಸುತಪದ ಶ್ರೀನರ ।
ಕೇಸರಿ ಮುಚ್ಚಿತ್ತವಾಸವಾಗಿಯೆ ಪೊರೆಗಂ ॥ ೧ ॥

ರಾಗ ಶಂಕರಾಭರಣ, ಅಷ್ಟತಾಳ.

ಪಾಹಿ ಮಾಂ । ಗಣನಾಥ ಸದ್ಗುಣಯೂಥ । ಪಾಹಿ
ಮಾಂ ॥ ಪಲ್ಲ ॥ ಪಾಹಿ ತ್ರಿಪುರಹರಪುತ್ರ । ಮಹ । ಪಾಹಿ
ನಿರ್ಜರನುತಿಪಾತ್ರ । ದಶ । ಬಾಹು ಕೋಮಲ ಪುಣ್ಯಗಾತ್ರ ।

Scanned by CamScanner

ಅಹ । ಸಾಹಸಭರಿತ ಮ । ಹಾಹಿಶಯನನತಿ । ಮೋಹನ
ಭಕ್ತ ಮ । ಸೋಹರ ಸುಚರಿತ್ರ ॥ ಪಾಹಿ ಮಾಂ ॥ ೧ ॥ ಗೌ
ಮುಖ ಗೌರಿಸಂಜಾತ । ದಿವ್ಯ । ಭುಜಗಭೂಷಣ ಸುಪ್ರಖ್ಯಾ
ತ । ತಾನು । ನಿಜಮೂಷಿಕನ ವರೂಥ । ದುಷ್ಟ । ಕುಜನಸ
ಹಾರಕ । ತ್ರಿಜಗಪೂಜಿತ ಪಾದಾಂ । ಬುಜವ ನಿತ್ಯದೊಳಾನು
ಭಜಿಪೆ ನೀ ಸಲಹೆನ್ನ ॥ ಪಾಹಿ ಮಾಂ ॥ ೨ ॥

ಭಾಮಿನಿ.

ಈಶನಡಿಗಳಿಗೆರಗಿ ಗಿರಿಜೆ ಮ । ಹಾ ಸರಸ್ವತಿ ಲಕ್ಷ್ಮಿ
ಯರ ಸಂ । ತೋಷದಿಂ ತಲೆವಾಗುತಜಮುಖ್ಯಮರರ್ಗಿಂಗೆ
ಗೀ ॥ ವ್ಯಾಸ ನಾರದ ಮುಖ್ಯ ಹರಿಪದ । ದಾಸಜನಕಭಿನಮಿಸಿ
ಗುರು ಲ । ಕ್ಷ್ಮೀಶ ನರಸಿಂಹನೊಳು ಬೇಡಿದು ಪೇಳ್ವೆನೀ ಕಥ
ಯಾ ॥ ೧ ॥

ರಾಗ ಸೌರಾಷ್ಟ್ರ, ತ್ರಿಪುಡೆತಾಳ.

ಭಾಗವತ ಪೌರಾಣಗಳ ಶುಕ । ಯೋಗಿಯಂದು ಪರಿ
ಕ್ಷಿತಂಗನು ॥ ರಾಗದಿಂ ಪೇಳಲ್ಕೆ ನೃಪ ತಲೆ । ವಾಗುತಂದೂ ।
॥ ೧ ॥ ಕೇಳಿದನು ಬಳಿಕಂಬರೀಷ ನೃ । ಪಾಲನಾ ದೂರ್ವಾ
ಸಶಾಪವ ॥ ಹೋಳುಗಳದಾ ಮುನಿಯನೆಂತವ । ಪಾಲಿಸಿದ
ನೂ ॥ ೨ ॥ ಪರಮ ಋಷಿಶಾಪವನು ಪೂರ್ವರೆ । ಹರಿ ಹರ
ಬ್ರಹ್ಮಾದಿಗಳಿಗರಿ ॥ ದರಸನಾವ ಸಮರ್ಥನೋ ಹರ । ಹ
ವಿಚಿತ್ರಾ ॥ ೩ ॥ ಅರುಹಬೇಕೆನಗದನು ದೇಹವ । ಧರಿಸಿದು
ಕಿದು ಫಲವಲಾ ಯೆನು ॥ ತೆರಗಲೆತ್ತುತಲೆಂದ ಮುನಿಪತಿ ।
ಹರಿಯ ನೆನೆದೂ ॥ ೪ ॥

ರಾಗ ಭೈರವಿ, ಝಂಪೆತಾಳ.

ಕೇಳರಸ ತರಣೀಕುಲ । ದೇಳಿಗೆಯೊಳುದಿಸಿ ಗುಣಿ ॥ ಶೀಲಾಂಬರೀಷ ನೃಪ । ನಾಳುತವಸಿಯ್ಯನೂ ॥ ೧ ॥ ಸುರಪ ನೈಶ್ವರ್ಯದೊಲು । ಮೆರೆದು ಕನಸಿಲಿ ತೋರ್ಪ ॥ ಸಿರಿಯಿ ದೆಂದಚ್ಯುತನ । ಸ್ಮರಿಸುತಡಿಗಡಿಗೇ ॥ ೨ ॥ ದಾನ ಧರ್ಮಾದಿ ವ್ರತ । ಮೌನ ಮಂತ್ರಗಳಿಂದ ॥ ತಾನೊದದನಂತಕನ । ಸೂನು ವಟ್ಟುಳಿಯಾ ॥ ೩ ॥ ಅಶ್ವಮೇಧಗಳ ಧರ । ಣೀಶ್ವರನು ವಿರಚಿಸುತ ॥ ವಿಶ್ವವನು ದಣಿಸಿದನು । ವಿಷ್ಣುಮಯವೆನುತಾ ॥ ॥ ೪ ॥ ಮಾಧವನಿಗತಿಪ್ರೀತಿ । ಯಿಾ ದಿವ್ಯ ವ್ರತವೆನುತ ॥ ದ್ವಾದಶಿಯ ವ್ರತವನೆರೆ । ಸಾಧಿಸುತ ಬರಲೂ ॥ ೫ ॥

ಭಾಮಿನಿ.

ಇನ್ನು ಪೇಳುವುದೇನು ಭೂಮಿಪ । ನುನ್ನತೋನ್ನತ ಭಕ್ತಿಗಳ ಸಂ । ಪನ್ನತೆಗೆ ತಾ ಮೆಚ್ಚಿ ತಲೆ ದೂಗುತಲಿ ಮುರಧ್ವಂಸೀ ॥ ಮನ್ನಿಸುತ ನೃಪರಕ್ಷೆಗೋಸುಗ । ಚಿನ್ಮಯನೆ ನೀಸಿಹುದು ಭೂಪನ । ಬೆನ್ನೊಳೆಂದಸುರಾರಿ ನೇಮಿಸಿದಾ ಸುದರ್ಶನವಾ ॥ ೧ ॥

ವಾರ್ಧಿಕ.

ಚಿತ್ತವಿಸು ಭೂಪ ಯಮುನಾತೀರದೊಳ್ ಬಳಿಕ । ಕಾರ್ತಿಕ ಶುದ್ಧ ದ್ವಾದಶಿಯ ದಿನ ಭೂಸುರರ । ಮೊತ್ತಮಂ ಪೂಜಿಸುತಲಾರು ಅರ್ಬುದ ದಿವ್ಯ ಕಪಿಲೆಗಳ ಶೃಂಗರಿಸುತಾ ॥ ಪೃಥ್ವಿಯಮರರ್ಗೆ ವಿಧಿವಿಹಿತದಿಂ ದಾನಗಳ । ನಿತ್ತು ಭೋಜನಗೈಸಿ ಪಾರಣೆಗೆ ಬರಿಸಲರು । ವತ್ತು ಸಾವಿರ ಶಿಷ್ಯಜನ ಸಹಿತ ದುರ್ವಾಸನಾ ಸಮಯಕೈತಂದನೂ ॥ ೧ ॥

ರಾಗ ಸಾಂಗತ್ಯ, ರೂಪಕತಾಳ.

ದೂರ್ವಾಸಮುನಿಯ ದೂರದಿ ಕಂಡು ಭೂಪತಿ । ಸರ್ವರು ಸಹಿತಿದಿರ್ಗೊಂಡು ॥ ಉರ್ವೀಶ ಪೀಠವನೇರಿಸಿ ಮುನಿಕುಲ । ಸಾರ್ವಭೌಮನ ಪೂಜಿಸುತ್ತಾ ॥ ೧ ॥ ಪಾದತೀರ್ಥವ ತಾನೆ ಧರಿಸುತೆಂದನು ಧನ್ಯ । ನಾದೆನಿಂದಿನ ದಿವಸದಲೀ ॥ ಆದರೀಗಳಿಗೆ ಸ್ನಾನಾದಿಗಳೆಸಗುತಾ । ರಾಧನೆಗೈತಹುದೆನಲೂ ॥ ೨ ॥ ಧಾರುಣೀಪತಿಯ ಭಕ್ತಿಗೆ ವಿನಯೋಕ್ತಿಗೆ । ಭೂರಿ ಮೆಚ್ಚುತ ತಲೆದೂಗೀ ॥ ಈರೀತಿ ಸಕಲ ಸಂಪದ ಭಕ್ತಿ ವಿಶ್ವಾಸ । ಮೂರು ಲೋಕದಿ ಕಾಣೆನೈಸೇ ॥ ೩ ॥ ಹಸಿದೆವೈಸಲೆ ಸ್ನಾನಾದಿಗಳನ್ನೆಲ್ಲವನು ತೀ । ರಿಸುತಖಿಳರು ಸಹಿತೈದಿ ॥ ಎಸೆವಾತಿಥ್ಯಗಳ ಕೈಗೊಂಬೆವೆಂದವರೆಲ್ಲ । ರುಸುರುತಾಕ್ಷಣ ಮರಳಿದರೂ ॥ ೪ ॥

ಭಾಮಿನಿ.

ಬಳಿಕವರು ಬೀಳ್ಕೊಂಡು ಯಮುನಾ । ಸಲಿಲವನು ಗಮಿಸುತ್ತ ಜಲದಲಿ । ಮುಳುಗಿ ಜಪ ನೇಮಾವಳಿಯನನುಕರಿಸುತಿರುತಿರಲೂ ॥ ತಳುವಿದನಲಾ ಮುನಿಪನೊಂದೇ । ಘಳಿಗೆ ತಾನೀ ದ್ವಾದಶಿಯನು । ತ್ತಳಲಿದನು ನೃಪನಿತ್ತಲಾ ವ್ರತಭಂಗವಾಯ್ತೆನುತಾ ॥ ೧ ॥

ರಾಗ ನೀಲಾಂಬರಿ, ಏಕತಾಳ.

ವರ ಮುನೀಶ ಬಾರನ್ಯಾಕೆ । ಕೊರಳ ಕೊಯ್ದನಲ್ಲೈ ॥ ಹರಹರಾ ಯಿದಾ ವಿಷಮಗತಿಯ । ಪರಿಹರಿಸಲಾನೆಂತೂ ॥೧॥ ಯತಿಯ ಬಿಡಲಿಕತಿದೋಷವೀ । ವ್ರತಿಪನ ಕಾದಿರಲು ॥ ವ್ರತಭಂಗವಾಯ್ತೇತರಲ್ಲಿ । ಹಿತವಹುದೆಂದರಿಯೇ ॥ ೨ ॥ ಪಾ

Scanned by CamScanner

ರಣೆಗೈಯೆಲ್ಕ ಕುಲಸಂ । ಹಾರಗೈವ ಮುನಿಯು ॥ ಸೇರಿತ್ತೆ ಯೊ ವ್ರತಭಂಗವಿ । ನ್ಯಾರು ಕಾಯ್ವರಕಟಾ ॥ ೩ ॥ ನಿನಗೆ ಪ್ರೀ ತಿಯೆಂದೀ ವ್ರತವ । ನನುಕರಿಸಿ ನಡದೇ ॥ ವನಜಾಕ್ಷ ನೀ ಕಾ ದುಕೊಳ್ಳೆ । ಮುನಿಯ ಕೈಯಿಂದೆನ್ನಾ ॥ ೪ ॥ ಭಕ್ತರಪ ಮಾನ ನಿನಗೆ । ನ್ನರ್ತಿಯನ್ನು ಸಲಿಸು ॥ ಮೃತ್ಯುವನ್ನು ಮಾ ಣಿಸೆಂದು । ಪೃಥ್ವೀಶನಳಲ್ದಾ ॥ ೫ ॥

ರಾಗ ಕೇದಾರಗೌಳ, ಅಷ್ಟತಾಳ.

ಅರಸನಿಂತಳಲಿ ಮೂರ್ಛಿತನಾಗಲೀಕ್ಷಿಸಿ । ಗುರು ವಸಿಷ್ಠನು ಮುದದೀ ॥ ಸುರಿವ ಕಂಬನಿಗಳ ತೊಡದು ಭೂವರನ ಕು । ಳ್ಳಿರಿಸುತಿಂತೆಂದನಾಗಾ ॥ ೧ ॥ ಬೆದರದಿರರಸ ಸುವ್ರತ ರಕ್ಷಿಸಿ ಮುನಿ । ಹೃದಯವು ಕದಡದಂತೇ ॥ ಉದಕದೊಳೆಸಗು ಪಾರಣೆಯ ನಿರ್ಣಯು ನಿನ । ಗಿದರಿಂದ ಕೇಳೆನಲೂ ॥ ॥ ೨ ॥ ಎನಲಾ ಮಾತನು ಕೇಳುತುದಕವ ಕೈಯೊಳಾಂ । ತಿನ ಕುಲತಿಲಕನಂದೂ ॥ ವನರುಹನಾಭನೆ ಗತಿಯೆಂದು ನೃಪತಿ ಪಾ । ರಣೆಯ ಕೈಗೊಂಡನಾಗಾ ॥ ೩ ॥ ಮುನಿಗಳತ್ತಲು ಸ್ನಾನಾದಿಗಳನು ತೀರಿಸಿ । ಬರಲಾಗಿ ಮನ್ನಿಸುತಾ ॥ ಜನಪ ನಿಂದಿರುತಿರೆ ತಿಳಿದು ದೂರ್ವಾಸನು । ಕನಲಿ ಹೂಂಕರಿಸುತಲೀ ॥ ೪ ॥ ಮುರಿದ ಹುಬ್ಬಿನ ಬಿಟ್ಟ ಕಂಗಳ ರೌದ್ರದಿ । ತಿರುಹುವಾಲಿಯ ಮೋರೆಯಾ ॥ ಉರಿಗಳ ಕಲ್ಪದ ಹರನ ಕೋಪದಲಿ ಭೂ । ವರನನೀಕ್ಷಿಸುತಿರ್ದನೂ ॥ ೫ ॥

ಭಾಮಿನಿ.

ನೋಡಲಾ ಮುನಿಯುಂಘ್ರಿಗಂಜಲಿ । ಗೂಡಿ ತಲೆವಾಗಿ ದನು ಕೋಪವ । ಮಾಡಲಾಗದು ನಿಮ್ಮ ಕರುಣದ ಕಂದ

ತಾನೆನುತಾ ॥ ರೂಥಿಪತಿ ನಿಜ ತನುಫನವನಿಗೆ । ನೀಡಿ ಬಿದ್ದಿ
ರಲುಂಗುಟದಲೀ । ಡಾಡಿದನು ಹೋಗೆನುತ ಜರೆದು ಮ
ನೀಂದ್ರನಿಂತೆಂದಾ ॥ ೧ ॥

ರಾಗ ಸೌರಾಷ್ಟ್ರ, ತ್ರಿವುಡೆತಾಳ.

ಎಲವೊ ಧನಯೌವನಮದಾಂಧನೆ । ಕುಲಗೆಡುಕ ದ
ಷ್ಟಾತ್ಮನೆನ್ನನು ॥ ನಿಲಿಸಿ ನೀ ಸತ್ಕರಿಸಿ ಮುನಿಸಂ । ಕುಲವ ಬ
ಟ್ಟೊ ॥ ೧ ॥ ಛಲದೊಳುಂಡೆ ಮುರಾಂತಕನ ಪದ । ನಳಿನಭ
ಕತನೆ ಯೆಲ್ಲ ತೋರ್ಪನು ॥ ಫಲವನೀಗಳೆ ನಿನ್ನ ದುಷ್ಕೃತ
ಕೆಲಸಗತಿಗೇ ॥ ೨ ॥ ಅರಿಯಲಾ ದುರ್ವಾಸನೆಂದೆಡೆ । ಮರೆ
ಯೊಗುವನಮರೇಂದ್ರನಂತಕ ॥ ನೆರಗಿ ಬದುಕುವರಾ ಕುಬೇ
ರಾ । ದ್ಯರುಗಳೆಲ್ಲಾ ॥ ೩ ॥ ಸೆರಗ ಹಾಸುವರಿಂದು ಭೂಪರ
ಮರಿಮದನೆ ನೀನೆನ್ನನೀಪರಿ ॥ ಪರಿಭವಿಸಿಹಸಿದಿರಿಸಿದ್ದೈ ಬಡ
ತಿರುಕನೆಂದೂ ॥ ೪ ॥ ನಿಂದಿರಿಕೆಯಲಿ ನಿನ್ನನುರುಹುವೆ । ನಿ
ಮ ನೋಡತ್ರಿಜಗ ಬಲುಹನು ॥ ಸಂದ ತಾಪಸಗೀಪೆಸರ ತೆರ
ನೆಂದು ಬಗದ್ದೈ ॥ ೫ ॥ ಇಂದುಧರನಲ್ಲೆನಲಿ ಮೇಣರ । ವಿಂದ
ಭವನಡ್ಡೈಸಲಾ ಗೋ ॥ ವಿಂದನೇ ಹಿಂದಿಕ್ಕಿಕೊಳಲಿದ । ರಂದ
ನೋಡೂ ॥ ೬ ॥

ಭಾಮಿನಿ.

ಎನುತ ಜಟೆಗಳ ಕೆದರಿ ನಿಂದೀ । ರ್ದನುಪಮನು ಹೂ
ಕರಿಸುತಡಿಗಡಿ । ಗನಲನೊಳು ನಿಂದಂತೆ ರೋಷಕರಾಳವಹಿ
ಯಲೀ ॥ ಮನ ಮುಳುಗಿ ಕೈಯಿಕ್ಕಿ ಹೆಡತಲೆ । ಘನ ಭಯ
ಕರ ಕಿತ್ತು ಜಡೆಯನು । ಜನಪನನು ತಿನ್ನೆನುತ ಬೀಸಾಡಿದನ
ಮೇದಿನಿಗೇ ॥ ೧ ॥

ರಾಗ ಶಂಕರಾಭರಣ, ಏಕತಾಳ.

ಬಳಿಕಾ ಮುನಿಯು । ಪ್ಪಳಿಸಿದ ಜಟೆಯಿಂ । ದಲಿ ಜನಿಸಿ
ದುದಾ । ಪ್ರಳಯದ ದಾವಾ ॥ ನಳನಂದದಿ ಸುಡು । ತಿಳೆಯಾ
ಕಾಶವ । ಬೆಳಬೆಳಗುತ ಖಿಡಿ । ಗಳ ಸಮ್ಮೇಳದಿ ॥ ಬಂದುದಾ
ಗಾ ॥ ೧ ॥ ಭುಗುಭುಗುಭುಗಿಲೆಂ । ದುಗುಳಲು ವಹ್ನಿಯ ।
ಪೊಗೆಯಿಂದಲಿ ಮೂ । ಜಗವಡ್ಡುದು ನೃಪ ॥ ತಿಗೆ ಕಡೆಗಾ
ಲವ । ನೆಗಳಿದ ಮುನಿಯೆಂ । ದಗಣಿತ ಸುರತತಿ । ತೆಗದೋ
ಡಿದುದು ॥ ಬಂದುದಾಗಾ ॥ ೨ ॥ ಉರಿಯುಗುಳುತ ಹಿಮ ।
ಗಿರಿಯಂತುಗ್ರದಿ । ಬರುತಿರೆ ಬಾಂಧವ । ಪರಿಜನ ಬೊಬ್ಬಿಡು ॥
ತೊರಳಲು ನೃಪಮೊಗ । ದಿರುಹದೆ ನೋಡುತ । ಮುರಹರ
ಕರುಣದಿ । ಪೊರೆಯೆನುತಿರ್ದನು ॥ ಕೇಳು ಭೂಪ ॥ ೩ ॥

ಭಾಮಿನಿ.

ಅರಸ ಕೇಳು ಮುಕುಂದದಾಸರು । ಪರಿಭವಕ್ಕೊಳಗ
ಹರೆ ಬಂದುದು । ಪರಮಪುರುಷನ ಚಕ್ರವದು ಸಂಘಟಿಸಲಾ
ಕ್ಷಣಕೆ ॥ ಉರಿವ ಕೃತ್ಯವನಟ್ಟಿ ಸುಟ್ಟುದು । ಸುರರು ಭಾಪೆನೆ
ಧಾರೆಗಳ ಧ । ಳ್ಳುರಿಯ ಧಾಳಿಯ ಚೂಣಿಯಲಿ ಚುಂಬಿಸಿ
ದುದಂಬರವಾ ॥ ೧ ॥

ರಾಗ ಭೈರವಿ, ಏಕತಾಳ.

ಸೃಷ್ಟಿಪ ಕೇಳ್ಮುನಿ ಮುದದಿ । ತೆಗ । ದಿಟ್ಟಾಕೃತಿಯಾ
ಕ್ಷಣದಿ ॥ ಸುಟ್ಟು ಪಣಿಯದುರೆ ಬಳಿಕ । ಬೆ । ನ್ನಟ್ಟಿತು ಮು
ನಿಯನು ಚಕ್ರ ॥ ೧ ॥ ಕೆಟ್ಟೆನಿದೆಂತ್ವಿಪರೀತ । ಬರ । ದಿಟ್ಟನೆ
ವಿಧಿ ಹಾ ಯೆನುತ ॥ ಬಿಟ್ಟು ಬಟ್ಟೆಯಲೋಡುತಲಿ । ತಾ । ನು
ಟ್ಟುದ ಸಂಹರಿಸುತಲಿ ॥ ೨ ॥ ಓಡಲು ಬಿಡೆನೆಂದೆನ್ನುತ । ಶರ ।

ಕೂಡೊವಗಿತು ಗರ್ಜಿಸುತ ॥ ಆಡಿದೆ ಬಹು ಭಾಷೆಗಳ । ಕಡೆ। ಗೋಡುವುದ್ಯಾಕೆಲೊ ಖೂಳ ॥ ೩ ॥ ಮುರಿ ನೃಪನನು ಮೇ ಣ್ನಿನ್ನ । ಸಂ । ಹರಿಸಿತ್ತಲ್ಲದೆ ನಾ ನಿನ್ನ ॥ ಬರಿದೆ ನಾ ಬಿಡೆನೆಂ ದೆನುತ । ಮುಂ । ಪ್ಪರಿಸುದು ಖಿಡಿಯನುಗುಳುತ ॥ ೪ ॥ ಕಾಡಿ ನೊಳುರಗನನುರಿಯು । ಕಬಿ । ದೋಡಿಪ ಪೋಲ್ ಮುನಿಪತಿ ಯು ॥ ಬಾಡಿ ಸುದರ್ಶನದುರಿಗೆ । ಬಿಡ । ದೋಡಿದ ಮುನಿ ದೆಸೆದೆಸೆಗೆ ॥ ೫ ॥

ಭಾಮಿನಿ.

ರೂಢಿಪತಿ ಕೇಳ್ ಚಕ್ರದುರುಬೆಗೆ । ಬಾಡಿ ಬಳುಕುತ ಸಾಗರಂಗಳು । ಮಾಡುವವು ಶಾಂತಿಯನು ಮುಳುಗಿದಡೆನುತ ಮುನಿ ಮುಳುಗೇ ॥ ಕೂಡೆ ಹೊಕ್ಕುದು ತಳಮುಳಲುತಾ । ಡೋಡಿನೊಳಗಿಟ್ಟುಂದವಾಗಲು । ಬೇಡೆನುತ್ತಲ್ಲಿಂದ ಸುರಗಿರಿ ಗುಹೆಗಳನು ಪೊಕ್ಕು ॥ ೧ ॥

ರಾಗ ಕಾಂಬೋಧಿ, ಝುಂಪೆತಾಳ.

ಬಳಿಕ ಗಿರಿಗುಹೆಗಳಲಿ । ತೊಳಲಿ ಪಾತಾಳಗಳ । ನಲ ಘುಮತಿ ಪೊಕ್ಕಲ್ಲಿ ತೊಳಲೀ ॥ ಬಳಿಯಲ್ಲೈತರುತಿರ್ಪ । ಚಕ್ರ ವನು ಕಂಡು ಮುನಿ । ಹೊಲಬುಗೆಟ್ಟಧಿಕ ಬಸವಳಿದೂ ॥ ೧ ॥ ಅಷ್ಟ ದಿಕ್ಪಾಲರೊಳು । ಸೇರಿ ಬದುಕುವೆನೆಂದು । ಬಟ್ಟೆದೆಗೆ ದಮರಸಭೆಯೊಳಗೇ ॥ ದಟ್ಟುಗೆಡದೆನ್ನುವನು । ಕಾಯಬೇಕೆಂ ದೆನುತ । ಸಾಷ್ಟಾಂಗವೆರಗಿ ನುತಿಸಲ್ಕೇ ॥ ೨ ॥ ಕರವ ಮುಗಿ ದಮರೇಂದ್ರ । ಹರಿಯುದೆನ್ನಿಂದಿದರ । ನರುಹಿ ಕರುಣಾವ ತೋ ರುತಿಂದೂ ॥ ಬರಿದೆ ನಾಚಿಸದೆನ್ನ । ಬಿಜಯ ಮಾಡೆಂದು ಪದ । ಕೆರಗಿ ಬೀಳ್ಕೊಟ್ಟನವರುಗಳಾ ॥ ೩ ॥ ವರುಣ ವಾಯು ಕು

ಬೇರ । ತರಣಿಸುತ ಪವನಸಖ । ರರ ಮನೆಯನೆಲ್ಲವನು ತೊ ಳಲೀ ॥ ಪರಿಹರಿಸುವಂದವನು । ಕಾಣದಳಲುತ ಶರಕೆ ॥ ಕ ರವ ಮುಗಿದೆಂದನತಿ ಮುದದೀ ॥ ೪ ॥ ಸುಡದಿರೆನ್ನ ಮಹಾ ತ್ಮ । ಸೈರಿಸರೆ ನಿಮಿಷ ಜಗ । ದೊಡೆಯನಹ ಕಮಲಜನ ಸೇ ರೀ ॥ ಪಡೆವೆನಭಯವನೆಂದು । ಸತ್ಯಲೋಕವನೈದಿ । ಪೊಡ ವಂಟು ಕಂಡನಜಸಭೆಯಾ ॥ ೫ ॥

ವಾರ್ಧಿಕ.

ಶ್ರುತಿಗಳುದ್ಘೋಷಿಸುವ ಸಂದದಿಂ ಚಂದದಿಂ । ಸತಿ ಸರ ಸ್ವತಿ ಯೆಡದಭಾಗದಿಂ ಯೋಗದಿಂ । ಜತೆಗೊಂಡ ಪೌರಾಣ ಶಾಸ್ತ್ರದಿಂ ಸ್ತೋತ್ರದಿಂ ಮೆರೆವ ಸಂಗೀತದಿಂದಾ ॥ ಶತಮುಖಾ ದ್ಯಮರ ಸಮ್ಮೇಳದಿಂ ಖೇಳದಿಂ । ನುತಿಪ ಸನಕಾದಿಗಳ ಮ ಧ್ಯದಿಂ ಚೋದ್ಯದಿಂ । ದತಿಪ್ರಭಾಮಯ ಪದ್ಮಪೀಠದಿಂ ಪಾ ದದಿಂದಜನ ಸಭೆ ಕಂಗೊಳಿಸಿತೂ ॥ ೧ ॥

ಕಂದ.

ಆ ಸಭೆಗೈತಂದಾ ಮುನಿ । ಕ್ಲೇಶದಿ ಪರಮೇಷ್ಠಿ ಪದ ದೊಳೆಡಗೆಡದಾಗಳ್ ॥ ನೀ ಸಲಹೆಂದಳಲುತ ದೂ । ರ್ವಾ ಸಂ ಬಲುವಿಧದಿ ಮರುಗಿ ನುತಿಸಿದನಾಗಳ್ ॥ ೧ ॥

ಭಾಮಿನಿ.

ನೀನೆ ಜಗದಾತ್ಮಕ ಜಗನ್ಮಯ । ನೀನೆ ಜಗದುತ್ಪತ್ತಿನಿಲ ಯ । ಸ್ಥಾನ ನೀನೇ ಗುಣತ್ರಯಾತ್ಮಕನಖಿಳ ಶಕ್ತಿಯುತಾ ॥ ನೀನೊಲಿದು ಪಾಲಿಸುವುದೆಂದಾ । ಮೌನಿ ಪಾದದೊಳೆರಗ ಲಾ ಚತು । ರಾನನನು ನಗುತಾ ಮುನಿಯ ತೆಗೆದಪ್ಪುತಿಂ ತೆಂದಾ ॥ ೧ ॥

ರಾಗ ಶಂಕರಾಭರಣ, ತ್ರಿವುಡೆತಾಳ.

ಮಗನೆ ಕೇಳ್ ಪುಸಿಯಲ್ಲ ಪೇಳಿದ । ಬಗೆಯಿಂದಹುದೂ
ಹೂಡುವೇ ॥ ಜಗವ ನಾಚಿಸಬೇಡ ತನ್ನನು । ಪೊಗಳಿ ನೀ
ನೂ ॥ ೧ ॥ ಹರಿಯ ಚಕ್ರವಿದ್ದೈಸೆ ನಿನಗೀ । ಪರಿಯ ಭಂಗಾ
ಬಿಡಿಸಿತು ॥ ಪರಿಹರಿಸಲೆಂತಚ್ಯುತನ ಕಿಂ । ಕರರು ನಾವೂ ॥
॥ ೨ ॥ ಈಶಶಿಗಳೀತರಣಿ ಶಿಖಿ ಗೌ । ರೀಶ ನಿಂತೀ ಸಕಲರು ॥
ಕೇಶವನು ತೋರಿದುದ ನಡೆಸುವ । ದಾಸರೈಸೇ ॥ ೩ ॥ ಸೃಷ್ಟಿ
ಪರಿಪಾಲನೆ ವಿನಾಶವಿ । ದಿಷ್ಟ ಹರಿಯಿಂದೈಸಲೆ ॥ ಬಟ್ಟೆ
ಯನು ನಾ ಕಾಣೆ ನಿನ್ನಯ । ಕಷ್ಟಗಳಿಗೇ ॥ ೪ ॥ ಇರದಿರ
ಮ್ಮಯ ಸಭೆಯೊಳಂಜುವೆ । ಹರಿಯ ಶರಕೆಂದಾತನ ॥ ನರುಹಿ
ಕಳುಹುತಲಚ್ಯುತನ ಪದ । ಸ್ಮರಿಸುತಿರ್ದ ॥ ೫ ॥

ಭಾಮಿನಿ.

ಅರಸ ಕೇಳಜನಿಂತೆನಲು ತುದಿ । ಮರನನೇರ್ದಲ್ಲಿಂದ
ಕೈಗಳ । ನರಳ್ಚಿ ಬಿದ್ದವನಂತೆ ಮುನಿ ಕಳವಳಿಸುತಡಿಗಡಿಗೇ ॥
ಮರುಗಿ ಮಾಡುವುದೇನು ಗಿರಿಜಾ । ವರನ ಸೇರುವೆನೆಂದು
ನಡೆದಾ । ಹರನ ಕೈಲಾಸವನು ಕಂಡುರುತರದಿ ನುತಿಗೈದಾ ೧

ವಾರ್ಧಿಕ.

ಎಡ-ಬಲದಿ ಗುಹ-ಗಣಪ ಭೂತಗಳ ಪ್ರೇತಗಳ । ಗ
ಡಣ ಕೈಮುಗಿದ ಮುನಿಜಾಲಗಳ ಮೇಳಗಳ । ನಡುವೆ ನಂದಿ
ಯನೇರ್ದ ಕೊರಳ ನಡು ಕಪ್ಪುಗಳ ಶಶಿಕಲಾಮೌಳಿಯಿಂ
ದಾ ॥ ತೊಡೆಯೇರ್ದ ಗೌರಿಯರ ಶೃಂಗಾರಲಂಕಾರ । ವಡಿಗೆ
ರಗುವನಿಮಿಷವ್ರಾತಗಳ ಗೀತಗಳ । ನುಡಿವಪ್ಸರೆಯರ ವರ
ಶೃಂಗಾರಪುರಗ್ಗಾರ ಸಂಭ್ರಮವು ಕಣ್ಗೆಸೆದುದೂ ॥ ೧ ॥

ಕಂದ.

ಈ ಪರಿ ಪೊರೆದಿಹ ಸಭೆಗಂ । ತಾಪಸವರ ದೂರ್ವಾಸಂ ನಡೆತಂದಾಗಳ್ ॥ ನೀ ಪೊರೆಯೆಂದಡಿಗೆರಗಿ ಪ್ರ । ಲಾಪಿಸಿ ಸುತಿಸಿದನಾ ಪರಶಿವನಂ ಭರದೊಳ್ ॥ ೧ ॥

ರಾಗ ಕೇದಾರಗೌಳ, ಝಂಪೆತಾಳ.

ಅಂಬರೀಷನ ಕಲಹದಿ । ಚಕ್ರವಿದು । ಬೆಂಬೊತ್ತಿ ಬರಲು ದೃಢದೀ ॥ ನಂಬಿದೆನು ತವ ಪಾದವ । ಸಲಹೆನೆ ತ್ರಿ । ಯಂಬಕನು ಪೇಳ್ದ ನಿಜವಾ ॥ ೧ ॥ ಆಗದಾಗದು ಸುಮ್ಮನೆ । ನೀ ಬಂದು । ಕೂಗಿದರೆ ಫಲವ ಕಾಣೆ ॥ ಸಾಗರಕೆ ಹುಲು ಸರಸಿಗೆ । ಸರಿಯೆಂದು । ನೀಗಳಹಲೊಪ್ಪದೆನಗೇ ॥ ೨ ॥ ಈ ಸಕಲ ಲೋಕಗಳಿಗೆ । ತನಗೆ ಕಮು । ಲಾಸನಾದ್ಯಮರರಿಂಗೇ ॥ ಈಶನಾತನೆ ದಿಟವಿದು । ಅವನ ನಿಜ । ವೀ ಸಮಸ್ತರಿಗರಿಯದೂ ॥ ೩ ॥ ಆತನಸ್ತ್ರವ ನಿಲಿಸಲು । ಮರೆಹೊಗುವು । ದಾತನನು ಹೊರತೆಮ್ಮೊಳೂ ॥ ಮಾತಾಡಲಿಲ್ಲ ಫಲವು । ನಡೆ ಜಗ । ನ್ನಾಥ ರಕ್ಷಿಸುವ ದಿಟವೂ ॥ ೪ ॥

ಭಾಮಿನಿ.

ರಾಯ ಕೇಳಾ ನುಡಿಗೆ ಮುನಿ ನಾ । ರಾಯಣನೆ ಗತಿಯೆನುತ ಸುಯ್ಯುತ । ಸಾಯಲಾರದೆ ಮುನಿಪನಲ್ಲಿಂದಿರದೆ ಜೀಳ್ಕೊಂಡೂ ॥ ಆ ಯತಿಯು ನಿಜ ಯೋಗಶಕ್ತಿಯೊ । ಳಾಯತಾಂಬಕಪುರವ ಪೊಗುತಿರೆ । ಶ್ರೀಯರಸ ವೈಕುಂಠ ಕಾಣಿಸಿತಧಿಕ ಕೌತುಕದೀ ॥ ೧ ॥

ರಾಗ ಭೈರವಿ, ಝಂಪೆತಾಳ.

ಪೇಳಲೆಂತವುಮು ಹರಿ । ಯೋಲಗದ ಸಂಭ್ರಮವ ॥ ಶ್ರೀಲೋಲಶಯನದತಿ । ಲೀಲೆಯಾಟಗಳ ॥ ೧ ॥ ಅರೆದೆರದ

ಲೋಚನದೊ । ಳುರಗಹಾಸಿಗೆಯಿಂದ ॥ ಮೆರೆವ ಶ್ರೀಭೂಮಿಯರು । ಚರಣವೊತ್ತುತಿರೆ ॥ ೨ ॥ ಕೊರಳಹಾರ ಕಿರೀಟ । ಪರಿಪರಿಯೊಳಾಭರಣ ॥ ಮೆರೆವ ಪೀತಾಂಬರದಿ । ಮುರವೈರಿ ಮೆರೆದ ॥ ೩ ॥ ಗಣನೆಯಿಲ್ಲದೆ ಮೆರೆವ । ವನಜಭವಭವಮುಖ್ಯ ॥ ರಿನ-ಶಶಿ-ಕೃಶಾನುಗಳ । ನೆಣಿಸಲರಿದೆನಗೆ ॥ ॥ ೪ ॥ ಶತಕೋಟಿಸಂಖ್ಯೆ ಸುರ । ಪತಿಗಳೆಮ-ವರುಣ-ಧನ ॥ ಪತಿಮುಖ್ಯ ಸುರರಲ್ಲಿ । ಜತೆಯಾಗಿ ನಿಲಲು ॥ ೫ ॥ ಸಕಲ ಸಂಭ್ರಮ ಮೆರೆವ । ಸಭೆಯೊಳಾ ದುರ್ವಾಸ ॥ ಮುಕುಳಿತಾಂಜಲಿಯಿಂದ । ಮುಂದುಗೆಡದೆಂದ ॥ ೬ ॥

ಭಾಮಿನಿ.

ಅರಿಯದಪರಾಧವನು ಮಾಡಿದೆ । ನುರುವ ನಿನ್ನೇಕಾಂತ ಭಕ್ತಗೆ । ಧರೆಯ ಹುಲು ನೃಪನಿಂದಲೇನಹುದೆಂದಹಂಕರಿಸೀ ॥ ಬರಿದೆ ಬಳಲಿದೆನೆನ್ನ ಮನದಾ । ಸರನು ಕಳೆಯ್ಯೊ ತಂದೆ ಹೊಕ್ಕೆನು । ಮೊರೆಯ ನಿನ್ನಂಘ್ರಿಗಳ ಕಮಲವೆ ತನಗೆ ಗತಿಯೆಂದಾ ॥ ೧ ॥

ರಾಗ ಮಧುಮಾಧವಿ, ಆದಿತಾಳ.

ನಿನ್ನ ಭಕ್ತನೊಳಾನು ಸೆಣಸಿದರಿಂದ । ಬೆನ್ನಟ್ಟಿ ಬಂತು ಚಕ್ರವು ಕೇಳ್ ಮುಕುಂದ ॥ ಬನ್ನಬಟ್ಟೈದಿ ನಾನಜ-ಮಹೇಶ್ವರರ । ಸನ್ನುತಿಸಲಿಕೆ ಕಾಣೆನು ಪರಿಹಾರ ॥ ೧ ॥ ತುದಿಗೆ ನಾ ನಿನ್ನ ಪಾದಗಳ ಸೇರಿದೆನು । ಮೊದಲೆ ನಾನರಿತಡೊಪ್ಪುವೆನೆ ಭಂಗವನು ॥ ಇದಕಿನ್ನು ಪರಿಹಾರವಾವುದೆಂಬುದನು । ವಿಧಿಸಿ ಕಾರುಣ್ಯದಿ ಬದುಕಿಸೆನ್ನುವನು ॥ ೨ ॥ ನಿನ್ನ ಕಾಂಬನ ಕವೆ ದುಃಖ ಜೀವಾಂಗೆ । ಧನ್ಯನಾದೆನು ಕಂಡರಿಂದ ನಿನ್ನವಗೆ ॥

ಅನ್ಯಾಯಮೆಸಗಿ ಬಂದಪರಾಧಗಳನು । ಮನ್ನಿಸೆನುತ ಸಾಷ್ಟಾಂಗದಿ ನುತಿಸಿದನು ॥ ೩ ॥

ಭಾಮಿನಿ.

ಬುದ್ಧನಾಲಿಸುತ್ತೊಯ್ಯನಾ ನಿಜ । ನಿದ್ರೆಯನು ಕೆಲಕೊತ್ತಿ ಕರುಣಾ । ಮುದ್ರಿತೇಕ್ಷಣವೆಸರು ವೆಳನಗೆ ವೆಳಗುವಸರಲೂ ॥ ಕದ್ರುಜನ ಮೆಲ್ಹಾಸಿನಲಿ ಕು । ಳ್ಳಿರ್ದ ಮುನಿಯನು ಕುಳ್ಳಿರಿಸಿಕೊಂ । ಡದ್ದಯನು ಮಾತಾಡಿದನು ಮನ್ನಿಸುತ ಮುನಿಯೊಡನೇ ॥ ೧ ॥

ರಾಗ ಬೇಗಡೆ, ಆದಿತಾಳ.

ಕೇಳು ಮುನಿಕುಲವರ್ಯ ನೀವರಿಯು । ಪೇಳುವೆ ತನ್ನಯ ಮೂಲ ಸಂಗತಿಯ ॥ ಕೇಳು ॥ ಪಲ್ಲ ॥ ಬಲವಂತ ನಾನೆಂಮು । ಬಂದೆ ನೀ ನಿಜವನು । ತಿಳಿಯಲಾಗಿಹೆ ಭಕ್ತ । ರಿಚ್ಛೆಯಲೀ ॥ ಸಲಹುವರೆನ್ನ ಪಂ । ಜರ ಗಿಣಿಯಂತೆ ಭೃತ್ಯ । ತಲೆ ಭಾವಿಸುವರ । ಬಂಟ ತಾನಿದಕೋ ॥ ಕೇಳು ॥ ೧ ॥ ನಿತ್ಯ ನಂಬಿರುವರ । ನೆಂತು ನಾ ಮರವೆಯಾ । ಪತ್ತವರದು ತನ್ನಾ । ಪತ್ತು ಕೇಳೊ ॥ ವೃತ್ರಾರಿಯುಜಭವಾ । ದಿಗಳೊಳು ಮನವಿಲ್ಲ । ಭಕ್ತರೆಂದರೆ ತಾನು । ಭಜಿಸಿದಲ್ಲಿರುವೆನೊ ॥ ಕೇಳು ॥ ॥ ೨ ॥ ಸೋಲವಿದೆನಗೆನ್ನ । ಬೇಡ ಭಕ್ತರಭೀಷ್ಟ । ಪಾಲಿಸುವಿಂತೆನ್ನ । ಶೀಲವಿದೂ ॥ ಪಾಲಿಸೆಂಬರೊಳು ನಿ । ಷ್ಠುರ ಪೇಳಲರಿಯೆ ಭೂ । ಪಾಲನಲ್ಲಿಗೆ ಪೋಗೀ ಪರಿಯ । ನೀಗುವುದೂ ॥ ಕೇಳು ॥ ೩ ॥

ಭಾಮಿನಿ.

ಆರ ದೆಶೆಯಿಂದಾಯ್ತು ನಿನಗೀ । ಭೂರಿ ಸಂಕಟವಾತನೇ ಪರಿ । ಹಾರವನು ಮಾಡುವನು ನೃಪ ನಿನಗಿನಿತು ತಪ್ಪುಗಳಾ ॥

ಹೋರುವವನಲ್ಲಾತ ಬರಿದೆ ವಿ । ಚಾರನಾಗದೆ ನಡೆ ಯೆನುತ
ನಾ । ರಾಯಣನು ನೇಮಿಸುತ ಕಳುಹಿದನತಿನಯೋಕ್ತಿಯ
ಲೀ ॥ ೧ ॥

ರಾಗ ಭೈರವಿ, ಅಷ್ಟತಾಳ.

ಇಂತೆಂದು ಕಳುಹಲಾಕ್ಷಣದಲ್ಲಿ । ಮುನಿ । ಕುಂತ ಮೇ
ಲ್ಮೊನೆಗೊಂಡ ತೆರದಲ್ಲೀ ॥ ಚಿಂತಿಸಿ ಧರೆಗೆ ಹಮ್ಮೈಸಿದ ।
ಖತಿ । ಯಾಂತು ಘೋಳಿಟ್ಟು ಬಿದ್ದೊರಳಿದ ॥ ೧ ॥ ಅಪರಾಧ
ವೆಸಗಿ ಬಂದಿರ್ಪೆನು । ಇನ್ನಾ । ನೃಪನ ಕಂಡೆಂತಿದ್ದಾಪೇಳ್ವೆನು ॥
ಕೃಪೆಯಿಲ್ಲದ್ಯಾತೆ ಶ್ರೀಹರಿಗಿಂದು । ಇನ್ನೀ । ಅಪಮಾನ ಹೇಗೆ
ಪೇಳುವೆನೆಂದು ॥ ೨ ॥ ಹರಿಯ ಬಾಣಕೆ ಕೈಯ ಮುಗಿವುತ ।
ಪೇಳ್ದ । ನರಸನಂಘ್ರಿಗಳನು ಸೇರುತ ॥ ಪರಿಹರಿಸುವೆನಿನ್ನುಪ
ದ್ರವ । ಯೆನ್ನ । ಬರಿದೆ ನೀ ಸುಡದೆ ಕಾಯೆಲೊ ದೇವ ॥ ೩ ॥

ಭಾಮಿನಿ.

ಅರಸ ಕೇಳಿಂತಾ ಮಹಾಸ್ತ್ರಕೆ । ಕರವ ಮುಗಿದೈವುತ್ತ
ನೃಪ ಪರಿ । ಹರಿಪನೋ ಮುನಿದಪನೊ ತನಗೆಂದಧಿಕ ಭೀತಿ
ಯಲೀ ॥ ಪರಮ ಭಾಗವತಾಗ್ರನೆನಿಪಾ । ಧರಣಿಪಾಲನ
ಹೊರೆಗೆ ಬಂದಾ । ವರ ಮುನಿಪಪಾದವನು ಪಿಡಿದನು ಕಾವು
ದೆಂದೆನುತಾ ॥ ೧ ॥

ರಾಗ ಕೇದಾರಗೌಳ, ಅಷ್ಟತಾಳ.

ಮುನಿಯ ಕಂಡರಸ । ನಾಚುತಲೆ ಹಿಂದಕೆ ತಾನು । ಜು
ಣುಗಿ ಹೆಜ್ಜೆಯನಿಡುತ ॥ ಘನಮಹೀಮರು ನೀವು । ಪಾದವ
ಪಿಡಿವುದಿ । ದನುಚಿತ ಕಾರ್ಯವೈಸೆ ॥ ೧ ॥ ಏನು ಬಂದಿರಿ
ನಮ್ಮಂ । ದಹ ಕಾರ್ಯವೇನೆಂದು । ತಾನೆ ಹಿಂದಕೆ ನಿಲಲು ॥

ನೀ ನಮ್ಮ ಸಲಹೆಂದು । ಪಿಡಿದ ಮುಂದ್ವರಿದು ಮು । ತ್ರಾತ್ರ ನೃಪ
ನಂಘ್ರಿಗಳ ॥ ೨ ॥ ಕಾಲ ನೀ ಬಿಡುಬಿಡೀ । ಪರಿಯ ಪಾಪವ
ತನ್ನ । ಮೇಲೆ ನೀ ಬಿಸುಡದಿರು ॥ ಪೇಳು ಕೇಳುವೆ ದೈಪ । ವಲ್ಲ
ದೆ ದ್ವಿಜರನ್ನ । ಪಾಲಿಸುವವರೆ ನಾವು ॥ ೩ ॥ ಕೊಡು ನಂಬುಗೆ
ಯ ರಕ್ಷಿ । ಸುವೆನೆಂದು ಮೇಲೆ ನಾ । ಬಿಡುವೆ ಪಾದಗಳ ಕೇ
ಳು ॥ ಕಡು ನೋಯಿಸಿರುವವಪ । ರಾಧಿಯೈಸಲೆ ತನ್ನ । ಬಿಡ
ದಿರೀದಿನ ದಿನದಿ ॥ ೪ ॥ ಕರುಣಾವಾರಿಧಿ ನಿನ್ನ । ಚರಣವ ಸೇ
ರ್ದೆ ನೀ । ಪೊರೆ ಕೃಪೆದೋರೆನುತ ॥ ಯೆರಗಲೀಕ್ಷಿಸಿ ಮನ ।
ಕರಗಿ ಚಕ್ರವ ಕಾಣು । ತರಸ ಸಂಸ್ತುತಿಗೈದನು ॥ ೫ ॥

ವಾರ್ಧಿಕ.

ಜಯಜಯಾನತಪೋಷ ತರಣಿಕೋಟಿಪ್ರಕಾಶ । ದಯ
ಸಮುದ್ರ ವಿಶೇಷ ದುಷ್ಟವಂಶವಿನಾಶ । ಭಯನಿವಾರಣರೂ
ಪ ಬಾಹುಬಲದಿ ಪ್ರತಾಪ ಭಕ್ತಜನಹೃದಯದೀಪಾ ॥ ಜಯ
ಜಯಾಚ್ಯುತಪ್ರೀತ ಸಕಲಗಾತ್ರವಿಖ್ಯಾತ । ಬಯಸಿ ಬೇಡುವೆ
ನುಡಿಯ ಪಾಲಿಸೀಪರಿ ಮುನಿಯ । ಭಯವ ಮಾಣಿಸು ನಿಲ್ಲಿ
ಸು ತನ್ನಭೀಷ್ಟವ ಸಲಿಸು ಜಯಜಯೆಂದಡಿಗೆಡದನೂ ॥ ೧ ॥

ಭಾಮಿನಿ.

ನಿನಗೆ ಕೃಪೆಯುಂಟಾದರೆನ್ನಲಿ । ಮುನಿಯ ಬಿಡುವುದೆ
ನುತ್ತ ಧರೆಯಲಿ । ಜನಪ ಮೈಯಿಕ್ಕಿರಲು ನಿಮಿಷಾರ್ಧದೊ
ಳು ಚಕ್ರವದೂ ॥ ಅನಲನೊಳಗುದಕವನು ತಳಿದಂ । ತನಿಮಿ
ಷರು ಭಾಪನಲು ಭೂಪನ । ಮನದ ಬಯಕೆಯನರಿತು ಹಿಂಗಿ
ದುದರಸ ಕೇಳೆಂದಾ ॥ ೧ ॥

Scanned by CamScanner

ರಾಗ ಮಧುಮಾಧವಿ, ತ್ರಿವುಡೆತಾಳ.

ಸತ್ತು ಬದುಕಿದ ಪೋಲು ಚೇತರಿ । ಸುತ್ತ ಮೈ ಮುರಿ
ದೀಕ್ಷಿಸುತ ಬೆ ॥ ನ್ನತ್ತಲಸ್ತ್ರಜ್ವಾಲೆಗಳ ಮುನಿ । ಪೋತ್ರಮನು
ನೆರೆ ಕಾಣದೆ ॥ ಧೈರ್ಯದಿಂದ ॥ ೧ ॥ ಮೃತ್ಯು ಹಿಂಗಿದುದರಸ
ತನ್ನನು । ಹೊತ್ತುಕೊಂಡೆ ಮಹಾತ್ಮ ಪಾವನ ॥ ಕೀರ್ತಿಯನು
ಘನ ಕಲ್ಪ ಪರಿಯಂ । ತತ್ಯಧಿಕ ಸುಖಿಯಾಗು ನೀ ॥ ನರಪ
ಕೇಳು ॥ ೨ ॥ ಇಂದು ಕಂಡೆನು ಕಂಡೆನೀ ಗೋ । ವಿಂದದಾ
ಸರ ಪುಣ್ಯಕಥೆಯೊಳಿ ॥ ದೊಂದು ಮಾಹಾತ್ಮೆಯನು ಹರ
ಹರ । ಇಂದು ನಾ ಕಂಡರಿತೆನು ॥ ಸತ್ಯವಾಗಿ ॥ ೩ ॥ ಸಂದ
ಸುರ ನರ ವೀರ ಮನು ಮುನಿ । ವೃಂದದಲಿ ಪರಿಯಾರು ನಿನ
ಗೆಲೆ ॥ ತಂದೆ ಪಸರಿಸಿಕೊಂಡೆ ಭಕ್ತರ । ಸಂದಣಿಯೊಳತಿ ಕೀ
ರ್ತಿಯ ॥ ಚಂದದಿಂದ ॥ ೪ ॥ ಮಾಡಿದಪರಾಧವನು ನೋಡ
ದೆ । ಬೇಡಿಕೊಂಡೀ ಚಕ್ರವನು ಕೃಪೆ ॥ ಮಾಡಿದೆ ಯೆಲಾ ನಿನ್ನ
ಮರೆವೆನೆ । ರೂಢಿಯುಳ್ಳನ ಕರವ ಮುಗಿದ ॥ ಕೇಳು ಭೂಪ ॥
॥ ೫ ॥

ಭಾಮಿನಿ.

ಒಮ್ಮೆ ಮುರಹರನಾಮವನು ದು । ಷ್ಕರ್ಮಿಗಳು ಕೇಳಿ
ದರೆ ಧರೆಯಲಿ । ನಿರ್ಮಲರು ತಾವಾಹರೈ ನೀನಾ ಜಗನ್ಮಯ
ನಾ ॥ ನೆಮ್ಮಿ ಬದುಕುವ ದಾಸರಲಿ ದು । ಷ್ಕರ್ಮ ಹೊದ್ದುವ
ದುಂಟೆ ತನ್ನೀ । ಜನ್ಮವಿದು ಫಲವಾಯ್ತು ತತ್ಸಂಭಾಷಣದಲಿಂ
ದಾ ॥ ೧ ॥

ರಾಗ ಸಾಂಗತ್ಯ, ರೂಪಕತಾಳ.

ರಾಜಾಧಿಪತಿ ಕೇಳಾ । ಮೇಲೆ ದೂರ್ವಾಸನ । ಪೂ
ಜಿಸಿ ಭಕ್ತಿಭಾವದಲೀ ॥ ಭೋಜನಗೈಸುತ್ತ । ಮುನಿಮತದಲಿ

Scanned by CamScanner

ಮುಹ । ರಾಜ ಕೈಗೊಂಡ ಪಾರಣೆಯ ॥ ೧ ॥ ಬಳಿಕಲಾ ನೃಪನನು । ಪೊಗಳುತಾಶೀರ್ವಾದ । ಗಳಲಿ ಮನ್ನಿಸಿ ಬೀಳು ಗೊಂಡು ॥ ಬಲು ಬಗೆಯಿಂದ ಭೂ । ಪನನು ಪಾಡುತ ಮುನಿ । ತಿಲಕ ಸಾರಿದ ನಿಜಾಶ್ರಮಕೆ ॥ ೨ ॥ ಅಂದು ದೂರ್ವಾಸನು । ತೆರಳಿದ ದಿನ ಪಿಡಿ । ದಿಂದಿಗೆ ತಿಂಗಳೀರಾರು ॥ ಸಂದುದು ನೃಪನುಪ । ವಾಸದಿ ಕಳಿದಾಯಿ । ತೊಂದು ವತ್ಸರ ಪರಿಯಂತ ॥ ೩ ॥ ಮುನಿಯ ಭೋಜನಗೈಸಿ । ಪಾರಣೆ ಕೈಗೊಂಡು । ಜನಪನಾ ಮೇಲೆ ಸಂತಸದಿ ॥ ವನಜಾಕ್ಷ ಭಕ್ತಿಯಿಂ । ದವನಿಯ ಪಾಲಿಸು । ತನುಪಮನಿರುತಿರ್ದನಾಗ ॥ ೪ ॥ ವರಪರೀಕ್ಷಿತನಿಗೀ । ಕಥೆಯನು ಶುಕಮುನಿ । ವಿರಚಿಸಿದಂದದೀ ಪರಿಯ ॥ ನರಿಯದೆ ಪೇಳ್ದೆ ದೋ । ಷಗಳಿದ್ದರದ ಪರಿ । ಹರಿಸಿ ರಕ್ಷಿಸು ನರಹರಿಯೇ ॥ ೫ ॥

ಭಾಮಿನಿ.

ಇದು ಪರಮಮಂಗಳ ಮಹೋದಯ । ವಿದು ಸದಾಯುಃಕೀರ್ತಿವರ್ಧನ । ವಿದು ಮುಕುಂದ ಪದಾಬ್ಜ ಭಕ್ತಿಪ್ರದ ಶುಭಪ್ರದವೂ ॥ ವಿದಿತ ಭಾಗವತಾನುಭಾವವ । ನಿದನು ಹೇಳುವ ಕೇಳುವತಿ ಸದ್ । ಹೃದಯರನು ಪಾಲಿಸುವ ಗುರು ನರಸಿಂಹನತಿಪಯದೀ ॥ ೧ ॥

ಮಂಗಲಪದ.

ಮಂಗಲ ಜಯ ಗುರು ನರಸಿಂಹಗೆ ॥ ಮಂಗಲಂ ॥ ॥ ಪಲ್ಲ ॥ ನಿಗಮವ ತಂದ ಮತ್ಸ್ಯಗೆ ಮಂಗಲಂ । ನಗವನೆತ್ತಿದ ಕೂರ್ಮಗೆ ಮಂಗಲಂ ॥ ಖಗಭಾಷಿತ ವರಹಗೆ ಮಂಗಲಂ । ಮಗುವಿಗೊಲಿದ ನರಸಿಂಹಗೆ ಮಂಗಲಂ ॥ ಮಂಗಲಂ ॥

॥ ೧ ॥ ಭೂಮಿ ಬೇಡಿದ ವಾಮನಗೆ ಮಂಗಲಂ । ಪ್ರೇಮದಿ ಭೃಗುಜ ರಾಮಗೆ ಮಂಗಲಂ ॥ ಭೂಮಿಜೆಪತಿ ರಾಘವಗೆ ಮಂಗಲಂ । ಕೋಮಲರೂಪ ಕೃಷ್ಣಗೆ ಮಂಗಲಂ ॥ ಮಂಗಲಂ ॥ ೨ ॥ ಬತ್ತಲೆ ನಿಂತ ಬೌದ್ಧಗೆ ಮಂಗಲಂ । ಉತ್ತಮ ಹಯವೇರ್ದಗೆ ಮಂಗಲಂ ॥ ಚಿತ್ತಜಪಿತನಿಗೆ ಶುಭಮಂಗಲಂ । ಭಕ್ತರ ಹೃದಯಸ್ಥಿತಗೆ ಮಂಗಲಂ ॥ ಮಂಗಲ ಜಯ ಗುರು ನರಸಿಂಹಗೆ ॥ ಮಂಗಲಂ ॥ ೩ ॥ ಶ್ರೀಃ ॥

ಯಕ್ಷಗಾನ ಅಂಬರೀಷಚರಿತ್ರೆಯು

ಸಂಪೂರ್ಣವು.

॥ ಶ್ರೀಕೃಷ್ಣಾರ್ಪಣಮಸ್ತು ॥

ಈ ಪುಸ್ತಕವು ಪಾವಂಜೆ ಗುರುರಾವ್ ಇವರ ಉಡುಪಿ ಶ್ರೀಕೃಷ್ಣಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು, ಸ್ವಕೀಯ ಉಡುಪಿ 'ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ'ದಿಂದ ಪ್ರಕಟಿಸಲ್ಪಟ್ಟಿತು. ಶಾ। ಶಕ ೧೮೫೦. ಇಸವಿ 1928.

Scanned by CamScanner